[Govt. of Karnataka C.R.P. 67]

| Deposition Sheets (RP.No.57) Form No.4 (Civil) |
|---|

**IN THE COURT OF CIVIL JUDGE & J.M.F.C., KARKALA.**

**Criminal Case No. 351/2023**

**.................................................Vs....................................**

ಸಾಕ್ಷಿದಾರನ ಹೆಸರು ಃ ದಾಮೋದರ ಕೆ.ಬಿ, ಪಿ.ಡಬ್ಲ್ಯೂಃ 13

ತಂದೆಯ ಹೆಸರುಃ ಕೆ. ಬಿ. ಕೃಷ್ಣ ಸಿ.ಡಬ್ಲ್ಯೂಃ 15

ಪ್ರಾಯ ಃ 59 ವರ್ಷ

ಉದ್ಯೋಗ ಃ ಪಿ ಎಸ್ ಐ ಹೆಜಮಾಡಿ

ವಾಸ ಃ ಕಾರ್ಕಳ

ದಿಃ 02-09-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರುಃ-

ನಾನು 2019 ರಿಂದ 2023 ರವರೆಗೆ ಕಾರ್ಕಳ ನಗರ ಪೋಲಿಸ್ ಠಾಣೆಯಲ್ಲಿ ಸಹಾಯಕ ಪೋಲಿಸ್ ಉಪ ನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸಿದ್ದೇನೆ.

ದಿಃ 16-07-2022 ರಂದು ನಾನು ಹಗಲು ಠಾಣಾ ಪ್ರಭಾರ ಕರ್ತವ್ಯದಲ್ಲಿದ್ದಾಗ ಚಾಸಾ-1 ರವರು ಸಂಜೆ 4.15 ಗಂಟೆಗೆ ನೀಡಿದ ಲಿಖಿತ ಪಿರ್ಯಾದಿಯನ್ನು ಸ್ವೀಕರಿಸಿ, ಆದರ ಆಧಾರದ ಮೇಲೆ ಠಾಣಾ ಅಕ್ರ ನಂ. 99/2022 ಕಲಂ 379 ಐ ಪಿ ಸಿ ಅಡಿಯಲ್ಲಿ ಪ್ರಕರಣ ದಾಖಲಿಸಿ ಅದರ ಪ್ರ.ವ.ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ನಂತರ ಅದೇ ದಿನ ಚಾಸಾ-1 ರವರು ತಕ್ಷೀರು ಸ್ಥಳವನ್ನು ತೋರಿಸಿ ಕೊಟ್ಟಿದ್ದು, ಅದರಂತೆ ತಕ್ಷೀರು ಸ್ಥಳಕ್ಕೆ ತೆರಳಿ ಚಾಸಾ-5 ಮತ್ತು 6 ರವರ ಸಮಕ್ಷಮ ಸಂಜೆ 5.15 ರಿಂದ 6.00 ಗಂಟೆಯವರೆಗೆ ಸ್ಥಳ ಮಹಜರು ಮಾಡಿ, ಭಾವಚಿತ್ರಗಳನ್ನು ತೆಗೆದು, ಮಹಜರಿಗೆ ಪಂಚರ ಸಹಿಗಳನ್ನು ತೆಗೆದುಕೊಂಡಿರುತ್ತೇನೆ. ನಂತರ ಚಾಸಾ-1 ರವರ ಮುಂದುವರಿದ ಹೇಳಿಕೆಯನ್ನು ಹಾಗೂ ಚಾಸಾ-2 ರಿಂದ 4 ರವರ ಹೇಳಿಕೆಗಳನ್ನು ದಾಖಲಿಸಿಕೊಂಡಿರುತ್ತೇನೆ.

ನಂತರ ದಿಃ 17-07-2022 ರಂದು ಪಿರ್ಯಾದಿಯವರ ಮುಂದುವರಿದ ಹೇಳಿಕೆಯನ್ನು ಪಡೆದು, ಘಟನಾ ಸ್ಥಳದಲ್ಲಿದ್ದ ಒಂದು ಸಿಲಿಕಾನ್ ಒಲೆಯನ್ನು ಚಾಸಾ-5 ಮತ್ತು 6 ರವರ ಸಮಕ್ಷಮ ಸೊತ್ತು ಸ್ವಾಧೀನತಾ ಮಹಜರು ಮುಖೇನ ಭಾವಚಿತ್ರಗಳನ್ನು

ತೆಗೆದು ಸ್ವಾಧೀನಪಡಿಸಿಕೊಂಡಿರುತ್ತೇನೆ. ನಂತರ ಅದನ್ನು ಠಾಣಾ ಸೊತ್ತು ಪಟ್ಟಿ ಸಂಖ್ಯೆ 135/22 ರಲ್ಲಿ ನಮೂದಿಸಿ ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ನಂತರ ಮಾನ್ಯ ನ್ಯಾಯಾಲಯದ ಆದೇಶದಂತೆ ಸದ್ರಿ ಸೊತ್ತನ್ನು ಚಾಸಾ-1 ರವರಿಗೆ ಬಿಡುಗಡೆ ಮಾಡಿರುತ್ತೇನೆ. ನಂತರ ಚಾಸಾ-2 ರಿಂದ 4 ರವರ ಮುಂದುವರಿದ ಹೇಳಿಕೆಗಳನ್ನು ದಾಖಲಿಸಿಕೊಂಡಿರುತ್ತೇನೆ.

ನಂತರ ದಿಃ 03-01-2023 ರಂದು ಚಾಸಾ-11 ಮತ್ತು 12 ರವರು 1 ಮತ್ತು 2 ನೇ ಆರೋಪಿತರನ್ನು ವಶಕ್ಕೆ ಪಡೆದು ನನ್ನ ಮುಂದೆ ಹಾಜರುಪಡಿಸಿದ್ದು, ಅವರುಗಳನ್ನು ಚಾಸಾ-8 ಮತ್ತು 9 ರವರ ಸಮಕ್ಷಮ ದಸ್ತಗಿರಿ ಮಹಜರು ಮುಖೇನ ವಶಕ್ಕೆ ಪಡೆದು ಸೂಕ್ತ ಭದ್ರತೆಯಲ್ಲಿ ಇರಿಸಿರುತ್ತೇನೆ. ನಂತರ 1 ಮತ್ತು 2 ನೇ ಆರೋಪಿತರ ಸ್ವಇಚ್ಛಾ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ದಿಃ 04-01-2023 ರಂದು ಚಾಸಾ-11 ರಿಂದ 13 ರವರು ಈ ಪ್ರಕರಣದ 3 ಮತ್ತು 4 ನೇ ಆರೋಪಿತರನ್ನು ಹಾಗೂ ತಕ್ಷೀರಿಗೆ ಸಂಬಂಧಿಸಿದ ಅಟೋ ರಿಕ್ಷಾ ನೊಂದಣಿ ಸಂಖ್ಯೆ ಕೆ.20 ಸಿ-1901 ನ್ನು ವಶಕ್ಕೆ ಪಡೆದು ನನ್ನ ಮುಂದೆ ಹಾಜರುಪಡಿಸಿರುತ್ತಾರೆ. ನಂತರ 3 ಮತ್ತು 4 ನೇ ಆರೋಪಿತರ ಸ್ವಇಚ್ಛಾ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ನಂತರ ಸ್ವಾಧೀನಪಡಿಸಿಕೊಂಡ ಅಟೋ ರಿಕ್ಷಾವನ್ನು ಠಾಣಾ ಸೊತ್ತು ಪಟ್ಟಿ ಸಂಖ್ಯೆ 1/2023 ರಲ್ಲಿ ನಮೂದಿಸಿ ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ನಂತರ ಚಾಸಾ-1 ರಿಂದ 4 ರವರ ಮುಂದುವರಿದ ಹೇಳಿಕೆಗಳನ್ನು ದಾಖಲಿಸಿಕೊಂಡಿರುತ್ತೇನೆ.

ಅದೇ ದಿನ 1 ನೇ ಆರೋಪಿ ತೋರಿಸಿಕೊಟ್ಟಂತೆ ಸಿಲಿಕಾನ್ ಒಲೆಗಳನ್ನು ಕಳುವು ಮಾಡಿದ ಸ್ಥಳ ಹಾಗೂ ಮಾರಾಟ ಮಾಡಿದ ಸ್ಥಳದ ಮಹಜರು ಮಾಡಿರುತ್ತೇನೆ. ನಂತರ ಚಾಸಾ-7 ರವರ ಹೇಳಿಕೆಯನ್ನು ದಾಖಲಿಸಿಕೊಂಡಿರುತ್ತೇನೆ. ನಂತರ ಠಾಣೆಗೆ ಬಂದು ವೈಧ್ಯಕೀಯ ತಪಾಸಣೆ ಮಾಡಿದ ನಂತರ 1 ರಿಂದ 4 ನೇ ಆರೋಪಿತರನ್ನು ಮಾನ್ಯ ನ್ಯಾಯಾಲಯದ ಮುಂದೆ ಹಾಜರುಪಡಿಸಿರುತ್ತೇನೆ. ನಂತರ ಕಡತವನ್ನು ಚಾಸಾ-16 ರವರಿಗೆ ಹಸ್ತಾಂತರಿಸಿರುತ್ತೇನೆ.

ಸಾಕ್ಷಿಯು ನಿಪಿ-1, ನಿಪಿ-2, ನಿಪಿ-4, ನಿಪಿ-8, ನಿಪಿ-9, ನಿಪಿ-10 ರಲ್ಲಿರುವ ತಮ್ಮ ಸಹಿಗಳನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಗಳನ್ನು ನಿಪಿ-1(ಬಿ), ನಿಪಿ-2(ಡಿ), ನಿಪಿ-4(ಡಿ), ನಿಪಿ-8(ಸಿ), ನಿಪಿ-9(ಸಿ), ನಿಪಿ-10(ಸಿ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-3, 5, 6, 12, 13 ಭಾವಚಿತ್ರಗಳನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ಪ್ರ.ವ.ವರದಿಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಪ್ರ.ವ.ವರದಿಯನ್ನು ನಿಪಿ-

14 ಎಂದು, ಸಾಕ್ಷಿಯ ಸಹಿಯನ್ನು 14(ಎ) ಎಂದು ಗುರುತಿಸಲಾಯಿತು. ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ 3 ಮತ್ತು 4 ನೇ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

ಪಾಟೀ ಸವಾಲುಃ ಆರೋಪಿತರ ಪರಃ ಶ್ರೀ. ಎ.ಕೆ.ಎಮ್. ವಕೀಲರಿಂದಃ

ಪ್ರಕರಣ ದಾಖಲಾದ ನಂತರ ಘಟನಾ ಸ್ಥಳಕ್ಕೆ 4-5 ಬಾರಿ ಹೋಗಿರುತ್ತೇನೆ. ತಕ್ಷೀರು ಸ್ಥಳ ಮಹಜರಿಗೆ, ಸೊತ್ತು ಸ್ವಾಧೀನತಾ ಮಹಜರಿಗೆ ಪಂಚರಾಗಿ ಬರಲು ನೋಟೀಸು ನೀಡಿರುವುದಿಲ್ಲ. ಎಲ್ಲಾ ದಾಖಲೆಗಳನ್ನು ಠಾಣೆಯಲ್ಲಿ ಕುಳಿತು ತಯಾರಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಯಾವುದೇ ಸಾಕ್ಷಿದಾರರ ಹೇಳಿಕೆ ಹಾಗೂ ಮುಂದುವರಿದ ಹೇಳಿಕೆಗಳನ್ನು ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ವಿಚಾರಕ್ಕೂ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಆರೋಪಿತರಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ.

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಪ್ರಧಾನ ಮತ್ತು ಪ್ರ.ದ.ನ್ಯಾದಂ., ಕಾರ್ಕಳ